## ವಿವೇಕಪ್ರಭ ಪತ್ರಿಕೆಯ ಚಂದಾವಿವರ

ಬಿಡಿ ಪ್ರತಿ: ರೂ.10; ವಾರ್ಷಿಕ: ರೂ 100 ;
ಮೂರು ವರ್ಷ: ರೂ.250; ಆಜೀವ (25 ವರ್ಷ): ರೂ.1500;
ಪೋಷಕ ಸಹಾಯಧನ : ರೂ.3000 ಅಥವಾ ಹೆಚ್ಚು
ವಿದೇಶಗಳಿಗೆ: (ಏರ್‌ಮೇಲ್): ವಾರ್ಷಿಕ: $15;
ಮೂರುವರ್ಷ: $45; ಆಜೀವ (25 ವರ್ಷ): $300;
ಪೋಷಕ ಸಹಾಯಧನ: $600 ಅಥವಾ ಹೆಚ್ಚು

ಚಂದಾಹಣವನ್ನು (Sri Ramakrishna Ashrama, Viveka prabha A/c ಹೆಸರಿಗೆ) ಎಂ.ಓ. ಅಥವಾ ಡಿ.ಡಿ. ಮೂಲಕ ಮಾತ್ರ ಕಳುಹಿಸಬೇಕು. ಚೆಕ್‌ಗಳನ್ನು ಸ್ವೀಕರಿಸಲಾಗುವುದಿಲ್ಲ. ಆಜೀವ ಚಂದಾದಾರರು ಮತ್ತು ಪೋಷಕರಿಗೆ ಮೈಸೂರು ಆಶ್ರಮದ ಪುಸ್ತಕಗಳ ಮೇಲೆ ಮೈಸೂರು ಆಶ್ರಮದ ಮೂಲಕ ನೇರವಾಗಿ ಕೊಂಡಾಗ ಮಾತ್ರ ಶೇ.20 ರಿಯಾಯತಿ ಕೊಡಲಾಗುವುದು. ಪೋಷಕ ಸಹಾಯಧನಕ್ಕೆ 80-G ಅಧಿನಿಯಮದ ಪ್ರಕಾರ ವರಮಾನ ತೆರಿಗೆ ವಿನಾಯತಿ ಇದೆ. ಪೋಷಕರ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

## ವಿವೇಕಪ್ರಭ ಪತ್ರಿಕೆಗೆ ಚಂದಾಸಂಗ್ರಾಹಕರಾಗಿ, ಶೇ. 20 ಕಮಿಷನ್ ಗಳಿಸಿ.

ಇದೀಗ ವರ್ಣರಂಜಿತವಾಗಿ ಮೂಡಿಬರುತ್ತಿದ್ದು, ಆಕರ್ಷಕ ಶೀರ್ಷಿಕೆಗಳನ್ನು ಒಳಗೊಂಡಿರುವ 'ವಿವೇಕಪ್ರಭ' ಪತ್ರಿಕೆಯನ್ನು ನಿಮ್ಮ ಬಂಧುಬಾಂಧವರಿಗೆ, ಸ್ನೇಹಿತರಿಗೆ ಪರಿಚಯ ಮಾಡಿಕೊಡಿ.

ಕೇವಲ 100 ರೂಪಾಯಿಗಳಿಗೆ 1 ವರ್ಷ ಕಾಲ 500 ಪುಟಗಳಿಗೂ ಹೆಚ್ಚಿನ
ಕೇವಲ 250 ರೂಪಾಯಿಗಳಿಗೆ 3 ವರ್ಷಗಳ ಕಾಲ 1500 ಪುಟಗಳಿಗೂ ಹೆಚ್ಚಿನ
ಕೇವಲ 1500 ರೂಪಾಯಿಗಳಿಗೆ 25 ವರ್ಷಗಳ ಕಾಲ 12,500 ಪುಟಗಳಿಗೂ ಹೆಚ್ಚಿನ

ಸಮೃದ್ಧ ಮೌಲ್ಯಯುತ ಆಧ್ಯಾತ್ಮಿಕ ಸಾಹಿತ್ಯ

ಇಂದೇ ತ್ವರೆ ಮಾಡಿ. ನಿಮಗೆ ಬೇಕಾದ ಪ್ರಚಾರ ಸಾಮಗ್ರಿಗಳು, ರಸೀದಿ ಪುಸ್ತಕಗಳಿಗೆ
ಈ ಫೋನ್ ಸಂಖ್ಯೆಗೆ ಕರೆಮಾಡಿ ಅಥವಾ ಸಂದೇಶ ಕಳಿಸಿ – 9481533505 (ಶ್ರೀ ವೇಣುಗೋಪಾಲ್ ಕೆ.ಪಿ.)

## ಜ್ಞಾನವಾಹಿನಿ

ಮೈಸೂರಿನ ಶ್ರೀರಾಮಕೃಷ್ಣ ಆಶ್ರಮವು ಗ್ರಾಮೀಣ ಪ್ರದೇಶಗಳಲ್ಲಿ 'ಜ್ಞಾನವಾಹಿನಿ' ಎಂಬ ವ್ಯಕ್ತಿತ್ವವಿಕಸನ ಕಾರ್ಯಕ್ರಮವನ್ನು ಮುಖ್ಯವಾಗಿ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಮೇಲ್ಪಟ್ಟು ನಡೆಸುತ್ತಿದೆ. ಈ ಕಾರ್ಯಕ್ರಮದಲ್ಲಿ ವಿವೇಕಾನಂದರ ಪ್ರತಿಮೆಯ ಮೆರವಣಿಗೆ, ವ್ಯಕ್ತಿತ್ವವಿಕಸನ ಶಿಬಿರ, ಚಲನಚಿತ್ರ ಪ್ರದರ್ಶನ, ಉತ್ತಮ ಪುಸ್ತಕಗಳ ಮಾರಾಟ ಮತ್ತು ಸಾರ್ವಜನಿಕರಿಗಾಗಿ ಕಾರ್ಯಕ್ರಮಗಳು ಇರುತ್ತವೆ. 2010 ರ ಜೂನ್ ತಿಂಗಳಿನಿಂದ ಈ ಕಾರ್ಯಕ್ರಮವನ್ನು ಆಯೋಜಿಸಲು ಅವಕಾಶ ಇದೆ. ಕನಿಷ್ಠ ಆರು ಹಳ್ಳಿಗಳಲ್ಲಿ, ಒಂದು ವಾರ ಕಾಲ ಈ ಕಾರ್ಯಕ್ರಮವನ್ನು ಆಯೋಜಿಸಬೇಕು ಮತ್ತು ನಾಲ್ಕು ಮಂದಿ ಕಾರ್ಯಕರ್ತರ ಸರಳ ಊಟ–ವಸತಿಗಳ ಏರ್ಪಾಡು ಮಾಡಬೇಕು. ವಸತಿ ಒಂದು ಕೇಂದ್ರಸ್ಥಾನದಲ್ಲಿ ಇರಬೇಕು. ಇತರ ಎಲ್ಲ ಖರ್ಚನ್ನೂ ಆಶ್ರಮದ ವತಿಯಿಂದಲೇ ಭರಿಸಲಾಗುತ್ತದೆ. ಈ ಕಾರ್ಯಕ್ರಮವನ್ನು ನಿಮ್ಮ ಪ್ರದೇಶದಲ್ಲಿ ಆಯೋಜಿಸಲು ಇಚ್ಛೆ ಇದ್ದರೆ, ಇಂದೇ ಈ ಫೋನ್ ಸಂಖ್ಯೆಯನ್ನು ಸಂಪರ್ಕಿಸಿ: 9972847734.

## ಶ್ರೀರಾಮಕೃಷ್ಣ ಆಶ್ರಮ, ಯಾದವಗಿರಿ, ಮೈಸೂರು – 570 020

'ವಿವೇಕಪ್ರಭ' ಪತ್ರಿಕೆಯ ವತಿಯಿಂದ ಕರ್ನಾಟಕದಾದ್ಯಂತ ಶಾಲಾ/ಕಾಲೇಜು ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ

## ಶಾರದಾ ಜ್ಞಾನಸುಧಾ ರಸಪ್ರಶ್ನೆ ಕಾರ್ಯಕ್ರಮ – 2010

ಈ ಸ್ಪರ್ಧೆಯು, ಕೆಳಕಂಡ ಪುಸ್ತಕಗಳನ್ನು ಆಧರಿಸಿ ಮೂರು ಭಾಗಗಳಲ್ಲಿ ಜರುಗುತ್ತದೆ

I – ತರಗತಿ 7 ರಿಂದ 9 – 'ವಿದ್ಯಾರ್ಥಿಗಾಗಿ' – ಸ್ವಾಮಿ ಪುರುಷೋತ್ತಮಾನಂದ

II – ತರಗತಿ 10 ರಿಂದ 12 – 'ವ್ಯಕ್ತಿತ್ವ ನಿರ್ಮಾಣ' – ಸ್ವಾಮಿ ವಿವೇಕಾನಂದ

III – ಶಾಲಾ ಕಾಲೇಜು ಉಪಾಧ್ಯಾಯರಿಗೆ – 'ಸೇವೆ' – ಸ್ವಾಮಿ ವಿವೇಕಾನಂದ

### 25,500 ರೂಪಾಯಿಗಳಿಗೂ ಹೆಚ್ಚಿನ ಬಹುಮಾನಗಳು

1. ಅಭ್ಯರ್ಥಿಗಳು ಪುಸ್ತಕ ನೋಡಿಕೊಂಡು ಮನೆಯಲ್ಲಿಯೇ ಕುಳಿತು ಉತ್ತರಿಸಬಹುದು; 2. ಪ್ರವೇಶ ಶುಲ್ಕ (ಪುಸ್ತಕ ಮತ್ತು ಪ್ರಶ್ನೆಪತ್ರಿಕೆ ಸೇರಿ) – ರೂ. 10 (ವಿದ್ಯಾರ್ಥಿಗಳಿಗೆ); ರೂ. 15 (ಶಿಕ್ಷಕರಿಗೆ); 3. ಎಲ್ಲಾ ಅಭ್ಯರ್ಥಿಗಳೂ ತಮ್ಮ ಶಾಲಾಕಾಲೇಜುಗಳ ಮೂಲಕವೇ ಭಾಗವಹಿಸಬೇಕು. 4. ವಿಚಾರಣೆಗಾಗಿ ಸಂಪರ್ಕಿಸಿ: 9481533506 (ಸತೀಶ್)

ಸಂಪಾದಕೀಯ

# ಭ್ರಷ್ಟಾಚಾರದ ಅಂತರಂಗ

'ಭ್ರಷ್ಟಾಚಾರ' ಎಂಬ ಪದವು ಕೇವಲ ಹಣದ ಬಗ್ಗೆ ಸೀಮಿತಗೊಂಡಿಲ್ಲ. ಎಲ್ಲ ಬಗೆಯ ಅನೈತಿಕ ಮತ್ತು ತಿರಸ್ಕಾರಯೋಗ್ಯವಾದ ಆಚರಣೆಗಳೂ ಭ್ರಷ್ಟ ಆಚಾರ ಅಥವಾ ಆಚರಣೆಗಳೇ. ಒಬ್ಬ ಚಾರಿತ್ರ್ಯಹೀನನಾದಾಗ ಅವನನ್ನು 'ಭ್ರಷ್ಟ' ಎಂದು ಕರೆಯುತ್ತೇವೆ. ಆಂತರಂಗಿಕವಾದ ಈ ಭ್ರಷ್ಟತೆ ಅವನು ಮಾಡುವ ಕೆಟ್ಟ ಕೆಲಸಗಳ ಮೂಲಕ ತಿಳಿದುಬರುತ್ತದೆ. ಅಂಥವನನ್ನೇ 'ಭ್ರಷ್ಟಾಚಾರಿ' ಎಂದು ಕರೆಯುವುದು. ಹೀಗಾಗಿ ಭ್ರಷ್ಟಾಚಾರಕ್ಕೆ ಮೂಲಕಾರಣ ವ್ಯಕ್ತಿಯ ಅಂತರಂಗದ ಭ್ರಷ್ಟತೆಯೇ ಆಗಿದೆ. ಒಂದು ಕನ್ನಡಿಯ ಮುಂದೆ ಯಾವ ವಸ್ತುವನ್ನು ಹಿಡಿದರೂ ಅದು ಕೊಳಕಾಗಿಯೇ ಕಾಣುತ್ತಿತ್ತಂತೆ. ಇದೇನಿದು ಎಂದು ನೋಡಿದಾಗ, ಕನ್ನಡಿಯೇ ಕೊಳಕಾಗಿರುವುದು ಕಂಡುಬರುತ್ತದೆ. ಹಾಗೆಯೇ ಇದು.

### ಪಾಪಾಚರಣೆ

ಜಾಗತಿಕ ಧರ್ಮಗಳು ಮಾನವನ ಪಾಪಾಚರಣೆಗೆ ಎರಡು ಬಗೆಯ ವಿವರಣೆಗಳನ್ನು ನೀಡುತ್ತವೆ. ಸೆಮೆಟಿಕ್ ಧರ್ಮಗಳು, ಅದರಲ್ಲೂ ಕ್ರೈಸ್ತಧರ್ಮ, ಮಾನವನು ಮೂಲತಃ ಪಾಪಿಯೇ ಎಂದು ಸಾರುತ್ತದೆ. ದೇವಪುತ್ರನಾದ ಏಸುಕ್ರಿಸ್ತನಲ್ಲಿ ಶರಣುಹೊಂದಿದವನು, ಪಾಪಗಳನ್ನು ಕಳೆದುಕೊಂಡು ದೇವರ ಆಶೀರ್ವಾದಕ್ಕೆ ಅರ್ಹನಾಗುತ್ತಾನೆ ಎಂದು ಅದು ಉಪದೇಶಿಸುತ್ತದೆ.

ಆದರೆ ಹಿಂದೂಧರ್ಮದ ಬಹುತೇಕ ಪಂಥಗಳ ಪ್ರಕಾರ ಜೀವಿಯು ಸ್ವಭಾವತಃ ಪರಿಶುದ್ಧನು. ಅವನ ಮೇಲೆ ಪಾಪದ ಕಲ್ಮಶ ಅಂಟಿಕೊಳ್ಳುತ್ತದೆ. ಭಗವದನುಗ್ರಹದಿಂದ ಅದನ್ನು ಕಳೆದುಕೊಂಡಾಗ, ಮತ್ತೆ ಪರಿಶುದ್ಧ ಸ್ವಭಾವ ಪ್ರಾಪ್ತವಾಗುತ್ತದೆ. ಇದು ಭಕ್ತಿಶಾಸ್ತ್ರಗಳ ಅಭಿಪ್ರಾಯ. ಅದ್ವೈತ ಸಿದ್ಧಾಂತದ ಪ್ರಕಾರ ಪಾಪದ ಭಾವನೆಯು ಅವಿದ್ಯೆಯಿಂದ ಜನಿತವಾದದ್ದು. ಚೈತನ್ಯಸ್ವರೂಪನಾದ ಆತ್ಮನಿಗೆ ಯಾವ ಬಾಹ್ಯ ಕಲ್ಮಶವೂ ಅಂಟಿಕೊಳ್ಳುವುದಿಲ್ಲ. ಆ ಭಾವನೆ ಬರಿಯ ಭ್ರಮೆಯಷ್ಟೇ. ಆ ಭ್ರಮೆಯನ್ನು ತೊಡೆದುಹಾಕಿದಾಗ, ಒಬ್ಬ ವ್ಯಕ್ತಿಗೆ ತಾನು ಪರಿಶುದ್ಧನೆಂಬ ಸ್ವರೂಪಜ್ಞಾನವಾಗುವುದು.

ಮೇಲಿನ ಎರಡು ದೃಷ್ಟಿಕೋನಗಳನ್ನು ಆಧಾರವಾಗಿಟ್ಟುಕೊಂಡು ದೈವಶಾಸ್ತ್ರೀಯ ನಂಬಿಕೆಗಳು, ಎರಡೂ ಬಗೆಯ ಧರ್ಮಗಳಲ್ಲಿ ಬೆಳೆದುಬಂದವು. ಕ್ರೈಸ್ತರ ಪ್ರಕಾರ, ಜಗತ್ತಿನ ಅಂತ್ಯದಲ್ಲಿ ನ್ಯಾಯ ನಿರ್ಧಾರಣೆಯ ದಿನವೊಂದು ಪ್ರಾಪ್ತವಾಗುವುದು. ಅಲ್ಲಿಯವರೆಗೂ ಜೀವಿಗಳು ತಮ್ಮ ಪ್ರೇತಶರೀರಗಳಲ್ಲಿ ಇದ್ದುಕೊಂಡೇ ಕಾಯಬೇಕು. ಆ ಮಹತ್ವದ ದಿನದಂದು, ದೇವರು ಜೀವಿಗಳು ಮಾಡಿದ ಪುಣ್ಯ ಅಥವಾ ಪಾಪಗಳಿಗೆ ಅನುಸಾರವಾಗಿ ಸ್ವರ್ಗವನ್ನೋ, ನರಕವನ್ನೋ ಕೊಡುತ್ತಾನೆ. ಅಂತಹ ಸ್ವರ್ಗ ಅಥವಾ ನರಕಗಳು ಎಂದೆಂದಿಗೂ ಇರುವಂಥವು. ಅವುಗಳನ್ನು ಜೀವಿಯು ಅನಂತಕಾಲದವರೆಗೆ ಅನುಭವಿಸುತ್ತಲೇ ಇರಬೇಕು.

ಹಿಂದೂಧರ್ಮದ ಪ್ರಕಾರ, ಜೀವಿಯು ತನ್ನ ಪುಣ್ಯ ಅಥವಾ ಪಾಪದ ತೀವ್ರತೆಗೆ ಅನುಸಾರವಾಗಿ ಸ್ವರ್ಗವನ್ನು ಅಥವಾ ನರಕವನ್ನು ಪಡೆಯುತ್ತಾನೆ. ಅಲ್ಲಿ ತನ್ನ ಪುಣ್ಯ ಅಥವಾ ಪಾಪಗಳಿಗೆ ತಕ್ಕ ಫಲಗಳನ್ನು ಉಪಭೋಗಿಸುತ್ತಾನೆ. ಅವುಗಳ ಸರಕು ತೀರಿದ ನಂತರ ಮತ್ತೆ ಮರ್ತ್ಯಲೋಕಕ್ಕೆ ಮರಳುತ್ತಾನೆ. ಕರ್ಮವನ್ನು ಮಾಡುವುದು ಮಾನವ ಶರೀರದಲ್ಲಿ ಮಾತ್ರ. ಅದಕ್ಕೆ ಫಲವನ್ನು ಅನುಭವಿಸುವುದು ಸ್ವರ್ಗ ಅಥವಾ ನರಕದಲ್ಲಿ. ಹಿಂದೂಗಳ ಪ್ರಕಾರ ಈ ಸ್ವರ್ಗನರಕಗಳು ಶಾಶ್ವತವಲ್ಲ. ಜೀವಿಯು ತಾನು ಮಾಡಿದ ತಪ್ಪಿಗೆ ಶಿಕ್ಷೆಹೊಂದಿ, ಅದನ್ನು ಸರಿಪಡಿಸಿಕೊಂಡು ಮುನ್ನಡೆಯುವ ಸಾಧ್ಯತೆ ಅಥವಾ ಅವಕಾಶ ಇಲ್ಲಿದೆ.

> "ನೀತಿ ಯಾವಾಗಲೂ 'ನಾನಲ್ಲ, ನೀನು' ಎನ್ನುವುದು. ಇದರ ಪಲ್ಲವಿಯೇ, 'ನಾನಲ್ಲ, ನನ್ನ ತ್ಯಾಗ'. ಅನಂತಾನಂದ ಮತ್ತು ಅನಂತಶಕ್ತಿಯನ್ನು ಇಂದ್ರಿಯದ ಮೂಲಕ ಅನುಭವಿಸುತ್ತೇನೆ ಎಂಬ ಭ್ರಾಂತಿಯ ವ್ಯಕ್ತಿತ್ವವನ್ನು ಮಾನವ ತ್ಯಜಿಸಬೇಕು ಎನ್ನುವುದು ನೀತಿ. ನೀತಿ ನಿಯಮಾವಳಿಗಳೆಲ್ಲ ತ್ಯಾಗದ ಮೇಲೆ ನಿಲ್ಲಬೇಕು. ಭೌತಿಕ ಪ್ರಪಂಚದ ಮೂಲಕ ಆ ಅನಂತ ಎಂದಿಗೂ ವ್ಯಕ್ತವಾಗಲಾರದು. ಅದು ಸಾಧ್ಯವೇ ಇಲ್ಲ. ಅದನ್ನು ಯೋಚಿಸುವುದಕ್ಕೂ ಆಗುವುದಿಲ್ಲ."
>
> – *ಸ್ವಾಮಿ ವಿವೇಕಾನಂದ*

### ನೈತಿಕಪ್ರಜ್ಞೆ

ದಕ್ಷಿಣೇಶ್ವರದ ಉದ್ಯಾನವನದಲ್ಲಿ ಅದ್ವೈತಿ ಸಾಧುವೊಬ್ಬನು ವಾಸವಾಗಿರುತ್ತಾನೆ. ಅವನು ದುರಾಚಾರಗಳಲ್ಲಿ ತೊಡಗಿರುವನೆಂದು ತಿಳಿದ ಶ್ರೀರಾಮಕೃಷ್ಣರು ಅವನನ್ನು ನಿಂದಿಸುತ್ತಾರೆ. ಅದಕ್ಕೆ ಅವನು, "ಎಲ್ಲವೂ ಬ್ರಹ್ಮವೇ ಆಗಿರುವಾಗ ಪಾಪಪುಣ್ಯಗಳೆಲ್ಲ ಒಂದೇ ಅಲ್ಲವೇ" ಎಂಬ ಧೂರ್ತ ಅದ್ವೈತದ ಮಾತನ್ನಾಡುತ್ತಾನೆ. ಅವನ ಕಪಟತನದಿಂದ ಕೋಪಗೊಂಡ ಶ್ರೀರಾಮಕೃಷ್ಣರು, "ನಿನ್ನ ಅದ್ವೈತಕ್ಕೆ ಉಗಿಯಬೇಕು" ಎನ್ನುತ್ತಾರೆ. ಈ ಪ್ರಸಂಗವು ಭಾರತೀಯರ ಮನಃಸ್ಥಿತಿಯ ದ್ಯೋತಕವಾಗಿದೆ ಎಂದೆನಿಸುತ್ತದೆ. ನಾವು ದೊಡ್ಡ ದೊಡ್ಡ ತತ್ತ್ವ ಸಿದ್ಧಾಂತಗಳ ಮಾತುಗಳನ್ನು ಬಾಯಿಯಿಂದ ಹರಿಯಬಿಡುತ್ತೇವೆ. ಆದರೆ ಅವೆಲ್ಲಕ್ಕೂ ಮೂಲಭೂತವಾದ ನೈತಿಕಪ್ರಜ್ಞೆಯನ್ನು ಬೆಳೆಸಿಕೊಂಡಿರುವುದಿಲ್ಲ. ಇದೇ ನಮ್ಮ ದೇಶದ ಅವನತಿಗೆ ಕಾರಣ.

'ನೈತಿಕಪ್ರಜ್ಞೆ' ಎನ್ನುವುದು ಆಧ್ಯಾತ್ಮಿಕ ಭಾವನೆಗೆ ಪೂರ್ವಭಾವಿಯಾಗಿ ಇರಬೇಕಾದ ಅಂಶ. 'ವಿವೇಕ' ಎಂಬ ಪದವು ಅದನ್ನು ನಿರ್ದೇಶಿಸುತ್ತದೆ. ವೇದಾಂತದಲ್ಲಿ ಇದನ್ನು 'ನಿತ್ಯ–ಅನಿತ್ಯ

ವಸ್ತು ವಿವೇಕ' – ಯಾವುದು ನಿತ್ಯ, ಯಾವುದು ಅನಿತ್ಯ ಎಂಬುದನ್ನು ಬಿಡಿಸಿ ನೋಡುವುದು ಎಂಬ ಅರ್ಥದಲ್ಲಿ ಬಳಸಿದ್ದಾರೆ. ಆದರೆ ಅದೇ ಪದವು ಸಾಮಾನ್ಯಾರ್ಥದಲ್ಲಿ ಯಾವುದು ಒಳ್ಳೆಯದು, ಯಾವುದು ಕೆಟ್ಟದ್ದು – ಇದನ್ನು ಬೇರ್ಪಡಿಸಿ ನೋಡುವ ಸಾಮರ್ಥ್ಯಕ್ಕೆ ಸಂವಾದಿಯಾಗಿ ಉಪಯೋಗವಾಗುತ್ತದೆ.

'ವಿವೇಕ' ಎಂಬುದು ಸಂಸ್ಕಾರಜನಿತವಾದಂಥದ್ದು. ಸ್ವಾಮಿ ವಿವೇಕಾನಂದರು ತಮ್ಮ ಕರ್ಮಯೋಗದಲ್ಲಿ ಚಾರಿತ್ರ್ಯವು ರೂಪುಗೊಳ್ಳುವ ಬಗೆಯನ್ನು ವಿವರಿಸುತ್ತಾರೆ. ನಾವು ಮಾಡುವ ಆಲೋಚನೆಗಳೇ ಕಾರ್ಯಗಳಾಗಿ ಪರಿಣಮಿಸುತ್ತವೆ. ಮತ್ತೆ ಮತ್ತೆ ಮಾಡುವ ನಿರ್ದಿಷ್ಟ ಕಾರ್ಯಗಳು ಅಭ್ಯಾಸಗಳಾಗಿಯೂ, ಆ ಅಭ್ಯಾಸಗಳಿಂದ ಸಂಸ್ಕಾರಗಳೂ ಮೂಡುತ್ತವೆ. ಸ್ವಾಮೀಜಿಯವರ ಪ್ರಕಾರ ಆ ಸಂಸ್ಕಾರಗಳ ಒಟ್ಟು ಮೊತ್ತವನ್ನೇ ನಾವು 'ಚಾರಿತ್ರ್ಯ'ವೆನ್ನುವುದು. ಸಚ್ಚಾರಿತ್ರ್ಯದಿಂದ ವಿವೇಕಬುದ್ಧಿ ಜಾಗೃತವಾಗುತ್ತದೆ. ಆಗ ನಾವು ಮಾಡುವ ಎಲ್ಲ ಕರ್ಮಗಳ ಮೌಲ್ಯಮಾಪನ ನಮಗೆ ಸಾಧ್ಯವಾಗುತ್ತದೆ. ಅಂತಹ ವ್ಯಕ್ತಿತ್ವವುಳ್ಳವರು ತಪ್ಪುದಾರಿ ಹಿಡಿಯುವುದಕ್ಕೆ ಹಿಂಜರಿಯುತ್ತಾರೆ. ಏಕೆಂದರೆ, ಅವರೇ ರೂಪಿಸಿಕೊಂಡ ಒಳ್ಳೆಯ ಸಂಸ್ಕಾರಗಳ ದಟ್ಟ ಪ್ರಭಾವ ಅವರ ನಡೆನುಡಿಗಳ ಮೇಲೆ ಅನವರತವೂ ಆಗುತ್ತಿರುತ್ತದೆ. ಇದನ್ನು ಶ್ರೀರಾಮಕೃಷ್ಣರು ನೀಡುವ ಪರಿಣತ ನರ್ತಕಿಯ ಉದಾಹರಣೆಯ ಮೂಲಕ ತಿಳಿದುಕೊಳ್ಳಬಹುದು. ಅವಳು ಎಷ್ಟು ಚೆನ್ನಾಗಿ ಅಭ್ಯಾಸ ಮಾಡಿರುತ್ತಾಳೆ ಎಂದರೆ, ಒಂದು ತಪ್ಪು ಹೆಜ್ಜೆಯನ್ನೂ ಇಡಲಾರಳು. ಆಕೆಯ ಅಭ್ಯಾಸಬಲದ ಸಂಸ್ಕಾರ ಅದನ್ನು ತಡೆಯುತ್ತದೆ.

ಪರಿಶುದ್ಧ ಮನಸ್ಸೇ ಗುರುವಾಗಿ ಕೆಲಸ ಮಾಡುತ್ತದೆ ಎಂದು ಶ್ರೀರಾಮಕೃಷ್ಣರು ಹೇಳುತ್ತಾರೆ. ಅಶುದ್ಧ ಮನಸ್ಸು ಅಂತಃಸಾಕ್ಷಿಯ ವಿವೇಕದ ಮಾತನ್ನು ಆಲಿಸಲಾರದು. ಆದರೆ ಪರಿಶುದ್ಧ ಮನಸ್ಸು ಅಂತಃಸಾಕ್ಷಿಯ ಪ್ರೇರಣೆಯಂತೆ ಚಿಂತಿಸುತ್ತದೆ; ಆ ಚಿಂತನೆಗಳೇ ಕಾರ್ಯಗಳಾಗಿ ಹೊರಹೊಮ್ಮುತ್ತವೆ. ಹೀಗೆ ಅಂತಃಸಾಕ್ಷಿಯ ಪ್ರೇರಣೆಯಿಂದ ಮೂಡಿಬರುವ ಕಾರ್ಯಗಳನ್ನು ಒಳ್ಳೆಯ ಕರ್ಮಗಳೆಂದೂ, ಅಂತಃಸಾಕ್ಷಿಯ ಆಶಯಕ್ಕೆ ವಿರುದ್ಧವಾದ ಕರ್ಮಗಳನ್ನು ಕೆಟ್ಟ ಕರ್ಮಗಳೆಂದೂ ವಿಭಾಗಿಸಬಹುದು. ಇಲ್ಲಿ ಅಂತಃಸಾಕ್ಷಿ ಎನ್ನುವುದು ನಮ್ಮಲ್ಲಿಯೇ ಹುದುಗಿರುವ ನೈತಿಕಪ್ರಜ್ಞೆಗೆ ಇನ್ನೊಂದು ಹೆಸರು. ಅದು ಎಷ್ಟು ಪ್ರಮಾಣದಲ್ಲಿ ನಮ್ಮ ಕಾರ್ಯಗಳನ್ನು ನಿಯಂತ್ರಿಸುತ್ತದೆಯೋ, ಅಷ್ಟರಮಟ್ಟಿಗೆ ನಾವು ಒಳ್ಳೆಯವರಾಗುತ್ತೇವೆ. ಅದರ ಹಿಡಿತ ಕಡಮೆಯಾದಷ್ಟೂ ನಾವು ದುಷ್ಟಮಾರ್ಗದಲ್ಲಿ ನಡೆಯುತ್ತೇವೆ.

ವಿವೇಕವೆಂಬುದು ನೈತಿಕಪ್ರಜ್ಞೆಯ ಆಂತರಂಗಿಕ ಕಾರಣವಾದರೆ, ಹೊರಗಿನ ಪರಿಸರ ಬಾಹ್ಯ ಕಾರಣವಾಗಿ ಪರಿಣಮಿಸುತ್ತದೆ. ಅದಕ್ಕಾಗಿ ಒಂದು ನಿದರ್ಶನವನ್ನು ನೀಡಬಹುದು. ಎರಡು ಗಿಳಿಗಳು ಒಂದೇ ತಾಯಿ ಗಿಳಿಯಿಂದ ಹುಟ್ಟಿದವು. ಅವುಗಳ ಅದೃಷ್ಟದಂತೆ, ಒಂದು ಗಿಳಿ ಕಟುಕನ ಮನೆಯಲ್ಲಿ ಬೆಳೆಯಿತು. ಇನ್ನೊಂದು ಸಾಧುವಿನ ಆಶ್ರಮದಲ್ಲಿ ಬೆಳೆಯಿತು. ಮೊದಲ ಗಿಳಿ, "ಹಿಡಿ, ಕೊಲ್ಲು" ಎಂಬ ಕೆಟ್ಟ ಮಾತುಗಳನ್ನೇ ಆಡುತ್ತಿತ್ತು. ಎರಡನೆಯ ಗಿಳಿಯ ಬಾಯಿಯಿಂದ, "ಬನ್ನಿ, ಕುಳಿತುಕೊಳ್ಳಿ, ನೀರು ಕುಡಿಯಿರಿ, ವಿಶ್ರಮಿಸಿಕೊಳ್ಳಿ" ಎಂಬ ಸವಿನುಡಿಗಳೇ ಹೊರಬೀಳುತ್ತಿದ್ದವು. ಇದರಿಂದ ಪರಿಸರದ ಪ್ರಭಾವದ ಮಹತ್ವವನ್ನು ತಿಳಿದುಕೊಳ್ಳಬಹುದು. ಒಂದೇ ಪರಿಸರದಲ್ಲಿ ಬೆಳೆದ ಮಕ್ಕಳು ಬೇರೆ ಬೇರೆ ರೀತಿಯಲ್ಲಿ ವರ್ತಿಸುವುದನ್ನೂ ನಾವು ಒಮ್ಮೊಮ್ಮೆ ಕಾಣುತ್ತೇವೆ. ಈ ಸಂದರ್ಭದಲ್ಲಿ, ಅವರ ಅಂತರಂಗದ ಸಂಸ್ಕಾರವು ಹೊರಗಿನ ವಾತಾವರಣಕ್ಕಿಂತ ಪ್ರಬಲವಾಗಿದೆಯೆಂದು ಭಾವಿಸಬೇಕಾಗುತ್ತದೆ.

## ನೈತಿಕಪ್ರಜ್ಞೆಯ ವಿಕಸನ

ನೈತಿಕಪ್ರಜ್ಞೆಯ ವಿಕಸನವು ಯಾವ ವ್ಯಕ್ತಿಯಲ್ಲಿ ಚೆನ್ನಾಗಿ ಆಗಿರುತ್ತದೆಯೋ, ಅಂತಹ ವ್ಯಕ್ತಿ ನೀತಿವಂತನಾಗಿ ಬಾಳುತ್ತಾನೆ. ಆ ಪ್ರಜ್ಞೆಯ ವಿಕಸನ ಯಾರಲ್ಲಿ ಕುಂಠಿತಗೊಂಡಿರುತ್ತದೋ ಅವನು ಭ್ರಷ್ಟಮಾರ್ಗದಲ್ಲಿ ನಡೆಯುತ್ತಾನೆ. ಹೀಗಾಗಿ ಈ ನೈತಿಕಪ್ರಜ್ಞೆಯ ವಿಕಸನವೇ ನಮ್ಮ ಮುಂದಿರುವ ಕರ್ತವ್ಯ.

ನೈತಿಕಪ್ರಜ್ಞೆಯ ವಿಕಸನಕ್ಕೆ ಬೇಕಾದಷ್ಟು ಅವಕಾಶವನ್ನು ದೇವರು ನಮಗಿತ್ತಿದ್ದಾನೆ. ವಿಚಾರ ಮಾಡುವ ಬುದ್ಧಿ, ಅದನ್ನು ಕಾರ್ಯರೂಪಕ್ಕೆ ಇಳಿಸುವ ಕ್ರಿಯಾಶಕ್ತಿ ಎರಡೂ ನಮ್ಮಲ್ಲಿ ಇವೆ. ಸುಭಾಷಿತವೊಂದು ಹೀಗೆ ಹೇಳುತ್ತದೆ:

**ನ ದೇವಾ ದಂಡಮಾದಾಯ ರಕ್ಷಂತಿ ಪಶುಪಾಲವತ್।**
**ಯಂ ತು ರಕ್ಷಿತುಮಿಚ್ಛಂತಿ ಸದ್ಬುದ್ಧ್ಯಾ ಯೋಜಯಂತಿ ತಮ್॥**

"ದೇವರು ಪಶುಪಾಲಕನ ಹಾಗೆ ಕೋಲನ್ನು ಹಿಡಿದುಕೊಂಡು ನಮ್ಮನ್ನು ಕಾಪಾಡುವುದಿಲ್ಲ. ನಮ್ಮನ್ನು ರಕ್ಷಿಸಲು ಅವನು ಇಚ್ಛಿಸಿದರೆ, ಒಳ್ಳೆಯ ಬುದ್ಧಿಯನ್ನು ನೀಡುತ್ತಾನೆ."

ನಮ್ಮಲ್ಲಿ ಬಹಳಷ್ಟು ಜನರಿಗೆ ಒಳ್ಳೆಯದು–ಕೆಟ್ಟದರ ಅರಿವು ಖಂಡಿತ ಉಂಟು. ಅಂಥವರು ಒಳ್ಳೆಯ ಫಲವನ್ನು ನಿರೀಕ್ಷಿಸುತ್ತಾರೆ, ಆದರೆ ಕೆಟ್ಟದ್ದನ್ನೇ ಮಾಡುತ್ತಾರೆ. ಕೆಟ್ಟಕೆಲಸದ ಫಲವನ್ನು ಅವರು ಬೇಡವೆನ್ನುತ್ತಾರೆ; ಆದರೆ ಕೆಟ್ಟದ್ದನ್ನು ಮಾಡುವುದನ್ನು ಮಾತ್ರ ನಿಲ್ಲಿಸುವುದಿಲ್ಲ. ಇದನ್ನೇ ಸಂಸ್ಕೃತ ಸುಭಾಷಿತವೊಂದು ಸ್ವಾರಸ್ಯಕರವಾಗಿ ಹೀಗೆ ಹೇಳುತ್ತದೆ:

**ಪುಣ್ಯಸ್ಯ ಫಲಮಿಚ್ಛಂತಿ ಪುಣ್ಯಂ ನೇಚ್ಛಂತಿ ಮಾನವಾಃ।**
**ನ ಪಾಪಫಲಮಿಚ್ಛಂತಿ ಪಾಪಂ ಕುರ್ವಂತಿ ಯತ್ನತಃ॥**

"ಪುಣ್ಯದ ಫಲವನ್ನು ಜನರು ಇಚ್ಛಿಸುತ್ತಾರೆ; ಆದರೆ ಪುಣ್ಯಕರ್ಮಗಳನ್ನು ಮಾಡಲು ಬಯಸುವುದಿಲ್ಲ. ಇದಕ್ಕೆ ವಿರುದ್ಧವಾಗಿ ಪಾಪದ ಫಲವನ್ನು ಯಾರೂ ಇಚ್ಛಿಸುವುದಿಲ್ಲ. ಆದರೂ ಪಾಪವನ್ನು ಪ್ರಯತ್ನಪಟ್ಟು ಮಾಡುತ್ತಾರೆ."

ಈ ಬಗೆಯ ಇಬ್ಬಂದಿ ಸ್ಥಿತಿಯೇ ಭ್ರಷ್ಟ ಆಚರಣೆಗಳಿಗೆ ಕಾರಣವಾಗುತ್ತದೆ. ಈ ಬಗೆಯ ಮನಃಸ್ಥಿತಿಯು ದುರ್ಯೋಧನನ ಮಾತಿನಲ್ಲಿ ಚೆನ್ನಾಗಿ ವ್ಯಕ್ತವಾಗುತ್ತದೆ:

**ಜಾನಾಮಿ ಧರ್ಮಂ ನ ಚ ಮೇ ಪ್ರವೃತ್ತಿಃ।**
**ಜಾನಾಮ್ಯಧರ್ಮಂ ನ ಚ ಮೇ ನಿವೃತ್ತಿಃ॥**

"ನನಗೆ ಧರ್ಮ ಯಾವುದು ಎನ್ನುವುದು ಗೊತ್ತು. ಆದರೆ ಅದನ್ನು ಆಚರಿಸಲು ಸಾಧ್ಯವಾಗುತ್ತಿಲ್ಲ. ಹಾಗೆಯೇ ಯಾವುದು

ಅಧರ್ಮ ಎನ್ನುವುದೂ ಗೊತ್ತು. ಆದರೆ ಅದನ್ನು ನನಗೆ ಬಿಡಲು ಆಗುತ್ತಿಲ್ಲ."

ಇದು ಭ್ರಷ್ಟಜೀವಿಯೊಬ್ಬನ ಮನೋವೈಜ್ಞಾನಿಕ ಚಿತ್ರಣವನ್ನು ನಮ್ಮ ಮುಂದೆ ಇಡುತ್ತದೆ. ಹಾಗಾದರೆ ನೈತಿಕಪ್ರಜ್ಞೆಯನ್ನು ಬೆಳೆಸಿಕೊಳ್ಳುವುದು ಹೇಗೆ? ನಮ್ಮ ಹಿರಿಯರು ತೋರಿಸಿರುವ ಮಾರ್ಗವೇನೆಂದರೆ, ಈ ವಿರೋಧಾಭಾಸದಿಂದ ಹೊರಬರುವುದು ಮತ್ತು ಒಳಿತುಕೆಡುಕುಗಳ ಬಗ್ಗೆ ನಮ್ಮ ಸಂವೇದನೆಯನ್ನು ಬೆಳೆಸಿಕೊಳ್ಳುತ್ತ ಹೋಗುವುದು.

### ಕಪಟತನದ ವರ್ಜನೆ

ನೈತಿಕಪ್ರಜ್ಞೆಯನ್ನು ಮರೆಮಾಡುವ ವೈರುಧ್ಯವನ್ನೇ ನಾವು ಸಾಮಾನ್ಯ ಭಾಷೆಯಲ್ಲಿ 'ಕಪಟತನ' ಎಂದು ಕರೆಯುತ್ತೇವೆ. ಕಪಟತನವು ನಮ್ಮ ಬಾಳಿನಲ್ಲಿ ಅಭದ್ರತೆಯನ್ನು, ಅಸ್ಥಿರತೆಯನ್ನು ಉಂಟುಮಾಡುತ್ತದೆ. ನಾವು ಮಾಡುತ್ತಿರುವ ಅನಾಚಾರಗಳು ಇತರರ ಕಣ್ಣಿಗೆ ಬಿದ್ದುಬಿಡುತ್ತವೆಯೇನೋ ಎಂಬ ತುಮುಲ ಯಾವಾಗಲೂ ಇರುತ್ತದೆ. ಅಂತಹ ತುಮುಲದಿಂದ ಕೂಡಿದ ಮನಸ್ಸು ಸದಾ ಅಶಾಂತವಾಗಿರುತ್ತದೆ. **ಅಶಾಂತಸ್ಯ ಕುತಃ ಸುಖಂ** – ಅಶಾಂತನಾದವನಿಗೆ ಸುಖವೆಲ್ಲಿಯದು? ಇದಕ್ಕೆ ವಿರುದ್ಧವಾಗಿ, ನಮ್ಮ ನಡೆ–ನುಡಿಗಳು ನೇರವಾಗಿದ್ದಲ್ಲಿ, ಅನಾಚಾರಗಳು ನಮ್ಮಿಂದ ಬಹುತೇಕ ಸಾಧ್ಯವಾಗುವುದಿಲ್ಲ. ಆಗ ಅಸ್ಥಿರತೆಗಾಗಲಿ, ಅದರಿಂದ ಉಂಟಾಗುವ ತುಮುಲಕ್ಕಾಗಲಿ, ಅಶಾಂತಿಗಾಗಲೀ ಆಸ್ಪದ ಇರುವುದಿಲ್ಲ. ಅಂತಹ ವ್ಯಕ್ತಿ ಮಾತ್ರವೇ ನಿಜವಾದ ಶಾಂತಿಯನ್ನು ಹೊಂದಬಲ್ಲ.

ಇದೇ ನಮಗೂ ಮಹಾತ್ಮರಿಗೂ ಇರುವ ವ್ಯತ್ಯಾಸ. ಅವರು ತಾವು ಹೇಗೆ ನಡೆದುಕೊಳ್ಳುತ್ತಾರೋ, ಆ ರೀತಿಯೇ ನುಡಿಯುತ್ತಾರೆ. ಆದರೆ, ನಾವು ಏನು ಮಾತನಾಡುತ್ತೇವೆಯೋ, ಅದರಂತೆ ನಡೆದುಕೊಳ್ಳಲು ಕೂಡ ವಿಫಲರಾಗುತ್ತೇವೆ. ಶ್ರೀರಾಮಕೃಷ್ಣರು ಕಪಟತನವನ್ನು ಬಹುವಾಗಿ ನಿಂದಿಸುತ್ತಿದ್ದರು. "ಮನಸ್ಸು ಮತ್ತು ಮಾತುಗಳು ಒಂದೇ ಆಗಿರಬೇಕು" ಎನ್ನುವುದು ಅವರ ಉಪದೇಶ. "ಭಾವರಾಜ್ಯದಲ್ಲಿ ಕಳ್ಳತನ ಮಾಡಬೇಡಿ" ಎಂದೂ ಅವರು ಹೇಳುತ್ತಿದ್ದರು. ಇದರರ್ಥ, ನಿಮ್ಮ ಆಂತರಿಕ ಭಾವನೆಗಳಿಗೆ ಅನುಸಾರವಾಗಿ ನಡೆದುಕೊಳ್ಳಿರಿ; ಒಳಗೊಂದು ಹೊರಗೊಂದು ಮಾಡಬೇಡಿರಿ ಎಂದು.

### ನೈತಿಕಸಂವೇದನೆ

ನಮ್ಮಲ್ಲಿ ಕೆಲವರು ಅತ್ಯಂತ ಸೂಕ್ಷ್ಮವಾದ ಭೌತಿಕ ಸಂವೇದನೆಯನ್ನು ಹೊಂದಿರುತ್ತಾರೆ. ಅಂಥವರು ಸ್ವಲ್ಪ ಸೆಖೆಯನ್ನೂ ತಡೆದುಕೊಳ್ಳಲಾರರು; ಸ್ವಲ್ಪ ಚಳಿಯೂ ಅವರಿಗೆ ಭೀಕರವೆನಿಸುತ್ತದೆ. ಇನ್ನು ಕೆಲವರು ಭಾವನಾತ್ಮಕ ಸಂವೇದನೆಯನ್ನು ಹೆಚ್ಚಾಗಿ ಹೊಂದಿರುತ್ತಾರೆ. ಅಂಥವರನ್ನು ಭಾವುಕರು ಎಂದು ನಾವು ಕರೆಯುತ್ತೇವೆ. ಅವರು ತಮ್ಮ ಭಾವನೆಯಲ್ಲಿನ ಅಲ್ಪಸ್ವಲ್ಪ ಏರುಪೇರುಗಳನ್ನೂ ನಿಯಂತ್ರಿಸಿಕೊಳ್ಳಲಾರರು. ಮೇಲಿನ ಎರಡೂ ಬಗೆಯ ಸಂವೇದನೆಗಳ ತೀವ್ರತೆ ಹೆಚ್ಚಿದಂತೆಲ್ಲಾ, ನಮ್ಮ ಬಾಳು ಅಸಹನೀಯವಾಗುತ್ತ ಹೋಗುತ್ತದೆ. ಆದರೆ ನೈತಿಕಸಂವೇದನೆ ಎನ್ನುವುದು ಹಾಗಲ್ಲ. ಒಳಿತು ಮತ್ತು ಕೆಡುಕುಗಳ ಬಗ್ಗೆ ಸೂಕ್ಷ್ಮವಾದ ಪರಿಜ್ಞಾನವನ್ನೇ ನೈತಿಕಸಂವೇದನೆ ಎಂದು ಕರೆಯುವುದು. ಒಳಿತುಕೆಡುಕುಗಳ ಬಗ್ಗೆ ಸಾಮಾನ್ಯ ರೀತಿಯಿಂದ ಎಲ್ಲರೂ ಅರಿತಿರುತ್ತಾರೆ. ಆದರೆ ನಿರ್ದಿಷ್ಟ ಸಂದರ್ಭದಲ್ಲಿ ಯಾವುದು ಒಳಿತು, ಯಾವುದು ಕೆಡುಕು ಎಂಬುದರ ಸೂಕ್ಷ್ಮವಿಶ್ಲೇಷಣೆ ನಮ್ಮಲ್ಲಿ ಬಹುತೇಕ ಮಂದಿಗೆ ಸಾಧ್ಯವಾಗುವುದಿಲ್ಲ. ಅಂತಹ ವಿಶ್ಲೇಷಣೆಯನ್ನು ಮಾಡುವ ಸಾಮರ್ಥ್ಯವೇ ನೈತಿಕಸಂವೇದನೆ. ಇದು ಬಹುತೇಕ ಮಾನಸಿಕವಾಗಿದ್ದರೂ, ವಾಚಿಕವಾಗಿಯೂ ಪ್ರಕಟಗೊಳ್ಳಬಹುದು. ನೈತಿಕಸಂವೇದನೆಯನ್ನು ನಾವು ಬೆಳೆಸಿಕೊಂಡಂತೆಲ್ಲ, ಭ್ರಷ್ಟತನದ ವೈರುಧ್ಯದಿಂದ ಬಿಡಿಸಿಕೊಳ್ಳುತ್ತ ಹೋಗುತ್ತೇವೆ. ಅದು ಶ್ರೇಷ್ಠವೂ, ನಿರಂತರವೂ ಆದ ಶಾಂತಿಯ ಗಳಿಕೆಗೆ ಎಡೆಮಾಡಿಕೊಡುತ್ತದೆ.

ನೈತಿಕಸಂವೇದನೆಯನ್ನು ಪರಿಪೂರ್ಣವಾಗಿ ಬೆಳೆಸಿಕೊಂಡಿದ್ದ ಮಹಾನ್‌ವ್ಯಕ್ತಿಗಳಲ್ಲಿ ಶ್ರೀರಾಮಚಂದ್ರ ಮತ್ತು ಯುಧಿಷ್ಠಿರ ಪ್ರಮುಖರಾದವರು. ತನ್ನ ತಂದೆ ನೇರವಾಗಿ ತನಗೆ ಕಾಡಿಗೆ ಹೋಗಲು ಹೇಳದಿದ್ದರೂ, ಆತನಿಗೆ ಒದಗಿಬಂದಿರುವ ಧರ್ಮಸಂಕಟವನ್ನು ನಿವಾರಿಸುವುದು ಪುತ್ರನಾದ ತನ್ನ ನೈತಿಕ ಕರ್ತವ್ಯ ಎಂಬ ನಿಲುವನ್ನು ಶ್ರೀರಾಮಚಂದ್ರನು ತಾಳಿದನು. ಇದು ನೈತಿಕಸಂವೇದನೆಗೆ ಅತ್ಯುತ್ತಮ ನಿದರ್ಶನ. ಅದೇ ರೀತಿ, "ಅಶ್ವತ್ಥಾಮನು ಹತನಾದನು" ಎಂಬ ಒಂದೇ ಒಂದು ಸುಳ್ಳು ವಾಕ್ಯವನ್ನೂ, ದ್ರೋಣಾಚಾರ್ಯರ ಸಮಕ್ಷಮದಲ್ಲಿ ಹೇಳುವುದಕ್ಕೆ ಹಿಂಜರಿದ ಯುಧಿಷ್ಠಿರನು, "ಅಶ್ವತ್ಥಾಮವೆಂಬ ಆನೆಯು ಸತ್ತುಹೋಯಿತು" ಎಂದೇ ಹೇಳುತ್ತಾನೆ. ಆದರೆ, 'ಆನೆ' ಎಂಬ ಶಬ್ದವನ್ನು ಯುಧಿಷ್ಠಿರ ಉಚ್ಚರಿಸುವಾಗ ಭೀಮನು ಶಂಖವನ್ನು ಊದಿಬಿಡುತ್ತಾನೆ. ಯುಧಿಷ್ಠಿರನ ಸತ್ಯನಿಷ್ಠೆಯ ಮೇಲೆ ಪೂರ್ಣ ವಿಶ್ವಾಸವಿರಿಸಿದ್ದ ದ್ರೋಣಾಚಾರ್ಯರು, ಮಗನ ಮರಣದ ಸುದ್ದಿ ಕೇಳಿ ದುಃಖಿತರಾಗಿ ಶಸ್ತ್ರತ್ಯಾಗ ಮಾಡುತ್ತಾರೆ.

ಸಾಧಾರಣ ಮನುಷ್ಯರಲ್ಲಿ ಈ ಬಗೆಯ ಸಂವೇದನಾ ಶಕ್ತಿ ಅಷ್ಟಾಗಿ ಇರುವುದಿಲ್ಲ. ರಾಮನ ಸ್ಥಾನದಲ್ಲಿ ಸಾಮಾನ್ಯ ಮನುಷ್ಯನೇನಾದರೂ ಇದ್ದಿದ್ದರೆ, ಅವನಿಗೆ, ತನ್ನ ತಂದೆ ತನಗೆ ಕಾಡಿಗೆ ಹೋಗಲು ನೇರವಾಗಿ ಹೇಳಿಲ್ಲ; ಹೇಳಿದರೂ ಅದು ತಪ್ಪು; ಆದ್ದರಿಂದ ಅದನ್ನು ಆಚರಿಸದಿದ್ದರೆ ಅಧರ್ಮವೇನಲ್ಲ ಎಂಬ ಭಾವನೆ ಬರುತ್ತದೆ. ಆದರೆ ರಾಮನು ಧರ್ಮ ಅಥವಾ ನೀತಿಯ ಗಾಢವಾದ ಮತ್ತು ಸೂಕ್ಷ್ಮವಾದ ವಿಶ್ಲೇಷಣೆ ಮಾಡಿ, ಕಾಡಿಗೆ ಹೋಗಲೇಬೇಕೆಂಬ ನಿರ್ಧಾರಕ್ಕೆ ಬರುತ್ತಾನೆ. ಹೀಗೆ ರಾಮನಲ್ಲಿ ನೈತಿಕಸಂವೇದನೆಯ ಉತ್ಕಟತೆಯನ್ನು ಕಾಣುತ್ತೇವೆ. ಅಂತಹ ಸೂಕ್ಷ್ಮತೆ ಸಾಮಾನ್ಯಜನರಿಗೆ ಸಾಧ್ಯವಾಗುವುದಿಲ್ಲ. ಹಾಗೆಂದೇ **'ರಾಮೋ ವಿಗ್ರಹವಾನ್ ಧರ್ಮಃ'** – ರಾಮನು ಧರ್ಮದ (ನೈತಿಕತೆಯ) ಪ್ರತಿರೂಪ ಎಂದು ರಾಮಾಯಣವು ಬಣ್ಣಿಸುತ್ತದೆ.

ನೈತಿಕಪ್ರಜ್ಞೆಯನ್ನು ಹೆಚ್ಚಾಗಿ ಹೊಂದಿರುವವರು ಸಜ್ಜನರು. ಅಷ್ಟು ಸಾಮರ್ಥ್ಯವನ್ನು ಹೊಂದದೆ, ಅನಾಚಾರಗಳಲ್ಲಿ ತೊಡಗಿರುವವರು ದುರ್ಜನರು. ಇವರಿಬ್ಬರ ನಡುವಣ ವ್ಯತ್ಯಾಸವನ್ನು ಒಂದು ಸುಭಾಷಿತ ಸ್ವಾರಸ್ಯವಾಗಿ ಹೀಗೆ ವರ್ಣಿಸುತ್ತದೆ:

**ಮನಸ್ಯೇಕಂ, ವಚಸ್ಯೇಕಂ, ಕರ್ಮಣ್ಯೇಕಂ ಮಹಾತ್ಮನಾಂ।**
**ಮನಸ್ಯೇಕಂ, ವಚಸ್ಯೇಕಂ, ಕರ್ಮಣ್ಯೇಕಂ ದುರಾತ್ಮನಾಂ॥**